ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯ್ತು. ದಿನಾಂಕ:೨೫.೪.೨೦೧೫ ಡಿಬ್ಲ್ಯೂ:೨

<u>ಮುಂದುವರೆದ ಮುಖ್ಯ ವಿಚಾರಣೆ</u> : ಪ್ರತಿವಾದಿ ಪರ ಶ್ರೀ ಬಿಜಿಬಿ ವಕೀಲರಿಂದ :

ನಾನು ಈ ದಾವೆಯಲ್ಲಿ ೨ನೇ ಪ್ರತಿವಾದಿ ಇರುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಹಾಜರುಪಡಿಸಿದ್ದು ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತದೆ. ನಾನು ಹಾಜರುಪಡಿಸಿರುವ ಎಲ್ಲಾ ದಾಖಲೆಗಳನ್ನು ನೋಡಿ ಗುರುತಿಸುತ್ತೇನೆ.

ನಾನು ಮೂಲ ಕ್ರಯ ಪತ್ರ ದಿ.೧೭.೧.೨೦೧೧ ನೇದ್ದನ್ನು ಹಾಜರುಪಡಿಸಿದ್ದು ಅದನ್ನು ನಿಡಿ.೮ ಎಂದು ಗುರುತಿಸಲಾಯ್ತು. ನಿಡಿ.೮ ಕ್ಕೆ ೧ನೇ ಪ್ರತಿವಾದಿ ಸಹಿ ಮಾಡಿರುತ್ತಾರೆ. ನಿಡಿ.೮ಕ್ಕೆ ನನ್ನ ಪೋಟೋ ಮತ್ತು ನನ್ನ ಸಹಿ ಇರುತ್ತದೆ ಮತ್ತು ನನ್ನ ತಾಯಿ ೧ನೇ ಪ್ರತಿವಾದಿಯ ಸಹಿ ಮತ್ತು ಪೋಟೋ ಇರುತ್ತದೆ. ಮತ್ತು ಸಾಕ್ಷಿದಾರರಾದ ಹನುಮಂತಪ್ಪ ಮತ್ತು ಶಿವಾನಂದಪ್ಪ ಇವರು ಮತ್ತು ಪತ್ರ ಬರಹಗಾರರು ಕೆ.ಎಂ.ಕರಿಬಸಯ್ಯ ಇವರು ಸಹಿ ಮಾಡಿರುತ್ತಾರೆ. ಸದರಿಯವರ ಸಹಿಗಳನ್ನು ನಿಡಿ.೮(ಎ) ದಿಂದ ನಿಡಿ.೮(ಡಿ) ಎಂದು ಗುರುತಿಸಲಾಯ್ತು. ಖರೀದಿದಾರರನ್ನು ಮತ್ತು ಸಾಕ್ಷಿದಾರರನ್ನು ಈಶ್ವರನಾಯ್ಕ ಮತ್ತು ಬಸಪ್ಪ ಇವರು ಗುರುತಿಸಿ ಸಹಿ ಮಾಡಿರುತ್ತಾರೆ. ಸದರಿಯವರ ಸಹಿಗಳನ್ನು ನಿಡಿ.೮(ಇ)ಮತ್ತು (ಎಫ್) ಎಂದು ಗುರುತಿಸಲಾಯ್ತು. ೨೦೧೦-೧೧ ನೇ ಸಾಲಿನ ದಾವಾಸ್ತಿಯ ಪಹಣಿ ಪತ್ರಿಕೆ ಹಾಜರುಪಡಿಸಿದ್ದು ಅದನ್ನು ನಿಡಿ.೯ ಎಂದು ಗುರುತಿಸಲಾಯ್ತು.

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತ ದಿನಾಂಕಃ ೧೭.೦೬.೨೦೧೫

ಪಾಟೀ ಸವಾಲು ಃ ವಾದಿ ಪರ ಶ್ರೀ ಎಕೆವಿ ವಕೀಲರಿಂದಃ

ನಾನು ಮನೆಕೆಲಸ ಮತ್ತು ವ್ಯವಸಾಯ ಮಾಡುತ್ತೇನೆ. ದಿ.೧೭.೦೧.೨೦೧೧ ರಂದು ನಾನು ನನ್ನ ತಾಯಿಯಿಂದ ದಾವಾ ಆಸ್ತಿ ಜಮೀನು ಸರ್ವೆ ನಂಬರ್.೮೪/ಬಿ ವಿಸ್ತೀರ್ಣ ೧.೮೭ ಎಕರೆ ಜಮೀನನ್ನು ೬೮ ಸಾವಿರ ರೂಪಾಯಿಗಳಿಗೆ ಕ್ರಯ ಪತ್ರದ ಮೂಲಕ ಖರೀದಿಸಿರುತ್ತೇನೆ. ಸದರಿ ಕ್ರಯಪತ್ರದ ೬೮ ಸಾವಿರ ರೂಪಾಯಿ ಹಣವನ್ನು ನಾನು ನನ್ನ ತಾಯಿಗೆ ನೀಡಿರುತ್ತೇನೆ. ಸದರಿ ಹಣವು ನನ್ನ ಸ್ವಂತ ಹಣ ಇರುತ್ತದೆ. ನಾನು ಸದರಿ ಆಸ್ತಿಯನ್ನು ಖರೀದಿಸುವುದಕ್ಕಿಂತ ಪೂರ್ವದಲ್ಲಿ ನನಗೆ ಯಾವುದೇ ಜಮೀನುಗಳು ಇರಲಿಲ್ಲ ಎಂದರೆ ಸರಿ ಮತ್ತು ನನಗೆ ಯಾವುದೇ ಆಧಾಯದ ಮೂಲ ಇರುವುದಿಲ್ಲ ಎಂದರೆ ಸರಿ. ನಾನು ಖರೀದಿಸಿದ ಜಮೀನು ನನ್ನ ತಾಯಿಯ ಹಿಸ್ಸೆಗೆ ಹೋದ ಬಗ್ಗೆ ದಾಖಲೆಯನ್ನು ನೋಡಿರುತ್ತೀರಾ ಎಂದರೆ ಸಾಕ್ಷಿಯು ದಾಖಲೆಯನ್ನು ನೋಡಿರುವುದಿಲ್ಲ ಆದರೆ ಅವರು ಮೌಖಿಕವಾಗಿ ಪಾಲುವಿಭಾಗ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಸ.ನಂ.೭/ಡಿ ರಲ್ಲಿ ಮತ್ತು ಸ.ನಂ.೮೪/ಬಿ ರಲ್ಲಿ ನಾಗಪ್ಪ ಮತ್ತು ಪ್ರಭಪ್ಪ ಇವರುಗಳ ಹಿಸ್ಸೆಗೆ ಹೋದ ಬಗ್ಗೆ ಪಹಣಿ ಪತ್ರಿಕೆಯನ್ನಾಗಲೀ ಅಥವಾ ಯಾವುದಾದರೂ ದಾಖಲೆಯನ್ನು ನೋಡಿರುತ್ತೀರಾ ಎಂದರೆ ಸಾಕ್ಷಿಯು ದಾಖಲೆಗಳನ್ನು ನೋಡಿರುವುದಿಲ್ಲ ಎಂದು ಹೇಳುತ್ತಾರೆ. ನನ್ನ ಸಹೋದರರಾದ ನಾಗಪ್ಪ ಮತ್ತು ಪ್ರಭಪ್ಪ ಇವರುಗಳು ಸದರಿ ಜಮೀನುಗಳನ್ನು ಏಕು ಕುಟುಂಬದಲ್ಲಿದ್ದಾಗ ಅವರ ತಾಯಿಯ ಸಮ್ಮತಿಯ ಮೇರೆಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಹೇಳುವುದೆನೆಂದರೆ ಅವರುಗಳು ಬೇರೆಯಾದಾಗ ಮಾರಾಟ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಪಹಣಿ ಪತ್ರಿಕೆಗಳಲ್ಲಿ ಪಾಲುವಿಭಾಗದ ಪ್ರಕಾರ ನನ್ನ ಸಹೋದರರ ಹಿಸ್ಸೆಗೆ ಹೋದ ಬಗ್ಗೆ ದಾಖಲೆ ಇರುವುದಿಲ್ಲ ಮತ್ತು ಈ ಕುರಿತು ಹಕ್ಕುಬದಲಾವಣೆ ಆಗಿರುವುದಿಲ್ಲ ಎಂದರೆ ಸರಿ. ನನ್ನ ಅಣ್ಣಂದಿರಾದ ನಾಗಪ್ಪ ಮತ್ತು ಪ್ರಭಪ್ಪ ಇವರುಗಳು ಮಾರಾಟ ಮಾಡಿದ ಜಮೀನುಗಳನ್ನು ಹೊರತುಪಡಿಸಿ ಬೇರೆ ಉಳಿದ ಎಲ್ಲ ಆಸ್ತಿಗಳಲ್ಲಿ ಪಾಲುವಿಭಾಗ ಆಗಿರುವುದಿಲ್ಲ ಎಂದರೆ ಸಾಕ್ಷಿಯು ಆಗಿರುತ್ತದೆ ಪಾಲುವಿಭಾಗವಾದ ನಂತರ ಅವರು ಮಾರಾಟ ಮಾಡಿರುತ್ತಾರೆ ಎಂದು ಹೇಳುತ್ತಾರೆ. ನಾನು ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಾನು ಮತ್ತು ನನ್ನ ತಾಯಿ ಮಿಲಾಕತ್ತಾಗಿ ಸುಳ್ಳಾಗಿ ಕ್ರಯಪತ್ರವನ್ನು ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ೬೮ ಸಾವಿರ ರೂಪಾಯಿ ಹಣವನ್ನು ಕೊಟ್ಟು ಸದರಿ ಜಮೀನನ್ನು ಖರೀದಿ ಮಾಡುವಷ್ಟು ಶಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ ಸಾಕ್ಷಿ

ಹೇಳುವುದೇನೆಂದರೆ ನನ್ನ ಗಂಡ ಚಾಲಕ ವೃತ್ತಿ ಮಾಡುತ್ತಾನೆ ಮತ್ತು ನನ್ನ ಅತ್ತೆ ಮತ್ತು ಮಾವನ ಆಸ್ತಿ ಇರುತ್ತದೆ ಎಂದು ಹೇಳತ್ತಾರೆ ಆದ್ದರಿಂದ ಸದರಿ ಆಧಾಯದಿಂದ ಖರೀದಿಸಿರುತ್ತೇನೆ ಎಂದು ಹೇಳುತ್ತಾರೆ. ನಾನು ಈ ದಾವೆಯಲ್ಲಿ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತೇನೆ. ನನ್ನ ತಕರಾರಿನಲ್ಲಿ ನನ್ನ ಗಂಡನ ಆಧಾಯದಿಂದ ಮತ್ತು ನನ್ನ ಅತ್ತೆ ಮತ್ತು ಮಾವನ ಜಮೀನುಗಳ ಆಧಾಯದಿಂದ ಸದರಿ ಜಮೀನನ್ನು ಖರೀದಿಸಿರುತ್ತೇನೆ ಎಂದು ಬರೆಯಿಸಿರುತ್ತೀಯಾ ಎಂದರೆ ಸಾಕ್ಷಿಯು ಬರೆಯಿಸಿರುವುದಿಲ್ಲ ಎಂದು ಹೇಳುತ್ತಾರೆ. ನಾನು ಖರೀದಿಸಿದ ಜಮೀನಿನಲ್ಲಿ ನನ್ನ ಸಹೋದರರಿಗೂ ಸಹ ಸಮಾನವಾದ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಹೇಳುವುದೇನೆಂದರೆ ಅವರುಗಳು ಮಾರಾಟ ಮಾಡಿದ ಜಮೀನುಗಳಲ್ಲಿಯೂ ಸಹ ನನಗೆ ಮತ್ತು ನನ್ನ ತಾಯಿಗೆ ಸಮಾನ ಹಕ್ಕು ಇರುತ್ತದೆ ಎಂದು ಹೇಳುತ್ತಾರೆ. ನನ್ನ ಪ್ರತಿವಾದ ಪತ್ರದಲ್ಲಿ ನನ್ನ ಅಣ್ಣಂದಿರುಗಳ ನಡುವೆ ಮೌಖಿಕವಾಗಿ ಪಾಲುವಿಭಾಗ ಆಗಿರುತ್ತದೆ ಎಂದು ಬರೆಯಿಸಿರುವುದಿಲ್ಲ ಎಂದರೆ ಸರಿ. ನನ್ನ ಅಣ್ಣಂದಿರುಗಳು ಮಾರಾಟ ಮಾಡಿದ ಜಮೀನುಗಳು ನಮ್ಮ ಕುಟುಂಬದ ಒಳಿತಿಗಾಗಿ ಮತ್ತು ಕುಟುಬಂದ ಹಿತಾಸಕ್ತಿಗಾಗಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿಗಳಿಗೆ ಮತ್ತು ಪ್ರತಿವಾದಿಗಳಿಗೆ ಸಮಾನವಾದ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಾಯಿ ಮಿಲಾಕತ್ತಾಗಿ ಸುಳ್ಳು ಪ್ರತಿವಾದ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿಯಿದೆ.

ಸಿವಿಲ್ ಜಡ್ಜ್ , ಹರಪನಹಳ್ಳಿ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಜೆಎಂಎಫ್‌ಸಿ , ಹರಪನಹಳ್ಳಿ.**